	ಆದಾಯ ರೂ	ಖರ್ಚು ರೂ
ಪ್ರವಾಸಿ ಮಂದಿರ ಪರಿವೀಕ್ಷಣಾ ಮಂದಿರ	81,34,319 00	7,78,05,980 00

ಉ) ಇಲ್ಲಿರುವ ಸಿಬ್ಬಂದಿಗಳನ್ನು ಮಂಜೂರಾದ ಹುದ್ದೆಗಳಿಲ್ಲದ ಕೆಲವು ಕಡೆಗಳಲ್ಲಿ ಸೂಪರ್ ನ್ಯೂಮರರಿ ನೌಕರುಗಳಿಂದ ಹಾಗೂ 1–07–84 ರ ನಂತರ ನೇಮಕಗೊಂಡಿರುವ ದಿನಗೂಲಿ ನೌಕರುಗಳ ನೇಮಕ ಮಾಡಿಕೊಳ್ಳಲಾಗಿದೆ ದಿನಾಂಕ 1–07–84 ನಂತರ ದಿನಗೂಲಿ ನೌಕರರು ಖಾಯಂ ಮಾಡುವ ಪ್ರಸ್ತಾವನೆಗೆ ದಿನಾಂಕ 10–04–2006 ರ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಕ್ರಮ ಕೈಗೊಳ್ಳಲಾಗುತ್ತಿದೆ

1551 (1684) ಶ್ರೀ ವೀರಪ್ಪ ದೇವಪ್ಪ ಕೆಸರಟ್ಟಿ ಜಿ (ಕನಕಗಿರಿ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಕನಕಗಿರಿ ವಿಧಾನಸಭಾ ಮತಕ್ಷೇತ್ರದಲ್ಲಿ ಬರುವ ಸಿದ್ಧಾಪುರದಿಂದ ನಂದ್ಯಾಳ ಗ್ರಾಮದವರೆಗೆ ಹಾಗೂ ಹನಗವಾಳದಿಂದ ಚಳ್ಳರ ರಸ್ತೆಗಳು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತಿದ್ದು ಇಲ್ಲಿಯವರೆಗೂ ಕಾಮಗಾರಿಯನ್ನು ಕೈಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,?

ಆ) ಹಾಗಿದ್ದಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಈ ರಸ್ತೆಗಳ ಅಭಿವೃದ್ಧಿಗೆ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬಂದಿದೆ

ಆ) ಸಿದ್ದಾಪುರ–ನಂದಿಹಾಳ ರಸ್ತೆಯ ಕಿಮೀ 24 00 ರಿಂದ 46 00 ರವರೆಗೆ ಒಟ್ಟು 22 00 ಕಿಮೀ ಉದ್ದವಿದ್ದು, ಈ ಪೈಕಿ 15 ಕಿಮೀ ಉದ್ದಕ್ಕೆ ಡಾಂಬರು

ಮೇಲ್ಪ್ಪ ರಸ್ತೆ ಇರುತ್ತದೆ ಉಳಿದ 7 ಕಿಮೀ ರಸ್ತೆಯ ಅಭಿವೃದ್ಧಿ ಹಾಗೂ ಡಾಂಬರೀಕರಣಕ್ಕಾಗಿ 2006–07 ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3054 ಯೋಜನೆ ಅಡಿಯಲ್ಲಿ ಟೆಂಡರ್ ಮುಖಾಂತರ ಗುತ್ತಿಗೆದಾರರನ್ನು ನೇಮಿಸಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ

ಹಣವಾಳದಿಂದ – ಚಳ್ಳೂರು ರಸ್ತೆಯು ಒಟ್ಟು 12 90 ಕಿ ಮೀ ಉದ್ದವಿದ್ದು, ಅದರಲ್ಲಿ ಹಣವಾಳದಿಂದ ಹಣವಾಳ ಕ್ಯಾಂಪ್‌ವರೆಗಿನ 2006–07 ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3054 ಯೋಜನೆಯಡಿಯಲ್ಲಿ ಸುಧಾರಣೆ ಹಾಗೂ ಮರು ಡಾಂಬರೀಕರಣ (4 00 ಕಿಮಿ) ಕಾಮಗಾರಿಯನ್ನು ಟೆಂಡರ್ ಮುಖಾಂತರ ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ

ಹಣವಾಳದಿಂದ ಚಳ್ಳೂರು ರಸ್ತೆಯ ಉಳಿದ ಭಾಗವನ್ನು ಹಾಗೂ ಸಿದ್ದಾಪೂರದಿಂದ ಬೆನ್ನೂರವರೆಗಿನ ಉಳಿದ ಭಾಗವನ್ನು 2007–08 ನೇ ಸಾಲಿನ ಆಯವ್ಯಯದಲಿ ಒದಗಿಸಲಾಗುವ ಅನುದಾನದ ಲಭ್ಯತೆಯನ್ನಾಧರಿಸಿ, ಮರು ಡಾಂಬರೀಕರಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು

1552 (1924) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ) – ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಇರುವ ಬಸ್ಸುಗಳೆಷ್ಟು,

ಆ) ಇದರಲ್ಲಿ ಹಳೆಯ ಬಸ್ಸುಗಳೇಷ್ಟು, (ನಿಗದಿತ ದೂರ ಕ್ರಮಿಸಿದ ವಾಹನಗಳು)

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಬಸ್ಸುಗಳು ಇವೆ,

ಈ) ಇದರಲ್ಲಿ ಹಳೆಯ ಬಸ್ಸುಗಳೆಷ್ಟು,

ಉ) ಹಳೆಯ ಬಸ್ಸುಗಳನ್ನು ಬದಲಾಯಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?